**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಎಫ್.ಟಿ.ಎಸ್.ಸಿ.-1, ಹಾವೇರಿ.**
**ಎಸ್.ಸಿ. ನಂ. 18/2020**

PW-18
CW-06

ಸಾಕ್ಷಿದಾರರ ಹೆಸರುಃ ನಾಗರಾಜ ಪರಸಪ್ಪ ಬಿಸನಳ್ಳಿ

ತಂದೆ ಹೆಸರುಃ ಪರಸಪ್ಪ ಬಿಸನಳ್ಳಿ

ವಯಸ್ಸುಃ 43

ಉದ್ಯೋಗಃ ವ್ಯವಸಾಯ ,

ವಾಸ ಸ್ಥಳಃ ಶಿಗ್ಗಾಂವಿ , ತಾಃಹಾವೇರಿ

ದಿನಾಂಕಃ **25.07.2025** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯ್ತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ-7 ಶರೀಫ ನನಗೆ ಪರಿಚಯ. ಪೋಲಿಸರು ಈ ಹಿಂದೆ ನನ್ನನ್ನು ಶಿಗ್ಗಾಂವಿ ಪೋಲಿಸ ಠಾಣೆಗೆ 5 ವರ್ಷಗಳ ಹಿಂದೆ ಕರೆಸಿದ್ದರು. ನಾವು ಬೇರೆ ಪ್ರಕರಣಕ್ಕೆಂದು ಪೋಲಿಸ ಠಾಣೆಗೆ ಹೋಗಿದ್ದು , ಅಲ್ಲಿ ಪೋಲಿಸರು ಹೇಳಿದಂತೆ ಸಹಿ ಮಾಡಿರುತ್ತೇವೆ. ನಾನು ಮತ್ತೆ ಅಲ್ಲಿ ಬೇರೆ ಯಾರನ್ನು ನೋಡಿಲ್ಲ. ನಾನು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ಪಂಚನಾಮೆ ಜರುಗಿಸಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ.

2) ನಾನು ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಗುರುತಿಗಾಗಿ ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

3) ನನ್ನನ್ನು ಪೊಲಿಸರು ಬೇರೆಯವರೊಂದಿಗೆ ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ. ನಾನು ಪೋಲಿಸರಿಗೆ ನಮ್ಮ ಸಮಕ್ಷಮ ಯಾರು ಏನು ಹೇಳಿಲ್ಲ ಹಾಗೂ ತೋರಿಸಿರುವುದಿಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ.

4) ನಾನು ಈಗ ನೋಡುತ್ತಿರುವ ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಘಟನಾ ಸ್ಥಳದ ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಗುರುತಿಗಾಗಿ ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

5) ನಾನು ಈಗ ಎರಡು ಛಾಯಾಚಿತ್ರಗಳನ್ನು ನೋಡುತ್ತಿದ್ದೇನೆ. ಅದರಲ್ಲಿ ನಾನು ಇರುತ್ತೇನೆ. ಸದರಿ ಛಾಯಾಚಿತ್ರಗಳನ್ನು ನಿಶಾನೆಯಾಗಿ ಗುರುತಿಸಬೇಕೆಂಬ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ಕಲಂ 65(B) ಭಾರತೀಯ ಸಾಕ್ಷಿ ಅಧಿನಿಯಮದ ಪ್ರಕಾರ ಪ್ರಮಾಣ ಪತ್ರ ನೀಡದ ಕಾರಣ ತಿರಸ್ಕರಿಸಲಾಯಿತು.

6) ನನಗೆ ಪೋಲಿಸರು ಠಾಣೆಗೆ ಹೋದಾಗ ಬಳೆ ಮತ್ತು ಸರವನ್ನು ತೋರಿಸಿದ್ದರು. ಅವು ಯಾರವು ಎಂದು ನನಗೆ ಗೊತ್ತಿಲ್ಲ. ಅವು ಪೋಲಿಸ ಠಾಣೆಯಲ್ಲಿ ಏಕೆ ಇದ್ದವು ಎಂದು ನಾನು ಪೋಲಿಸರನ್ನು ವಿಚಾರಿಸಿ ತಿಳಿದುಕೊಂಡಿಲ್ಲ. ನಾನು ಠಾಣೆಯಲ್ಲಿ ನೋಡಿದ ಆಭರಣಗಳನ್ನು ಛಾಯಾಚಿತ್ರಗಳಲ್ಲಿ ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ. ಸದರಿ ಛಾಯಾಚಿತ್ರಗಳನ್ನು ನಿಪಿ-12 ರಿಂದ 16 ಎಂದು ಗುರುತಿಸಲಾಗಿದೆ. ನಾನು ಸದರಿ ಆಭರಣಗಳನ್ನು ಪೋಲಿಸ ಠಾಣೆಯಲ್ಲಿ ನೋಡಿದ್ದು ನಂತರ ಪೋಲಿಸರು ಒಬ್ಬರು ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಯೂ ಸಹ ನೋಡಿರುತ್ತೇನೆ. ಆ ಮನೆಯಲ್ಲಿ ನಾವು , ಪೋಲಿಸರು ಹಾಗೂ ಒಬ್ಬ ವ್ಯಕ್ತಿ ಹೋಗಿದ್ದವು. ಆ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಆ ವ್ಯಕ್ತಿ ಈ ಕ್ಷಣ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ಪೊಲಿಸರು ನನ್ನ ಸಮಕ್ಷಮ ಏನನ್ನು ಅಮಾನತ್ತು ಪಡಿಸಿಕೊಂಡಿಲ್ಲ.

7) ನಾನು ಈಗ ನೋಡುತ್ತಿರುವ ಮತ್ತೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಗುರುತಿಗಾಗಿ ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

8) ನಾನು ಈಗ ನೋಡುತ್ತಿರುವ ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ನೋಟಿಸ

ಆಗಿದ್ದು ಅದನ್ನು ಗುರುತಿಗಾಗಿ ನಿಪಿ-20 ಎಂದು, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂದಿಸಿದಂತೆ ನನಗೆ ಹೆಚ್ಚಿನ ಮಾಹಿತಿ ಇಲ್ಲ

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಸಾಕ್ಷಿಯ ಹೇಳಿದ ಸಾಕ್ಷಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

9) ದಿಃ04.09.2019 ರಂದು ನನ್ನನ್ನು ಹಾಗೂ ಚಾಸಾ-7 ಶರಿಫ ಇವರನ್ನು ಚಾಸಾ-39 ಚಿದಾನಂದ ಶಿಗ್ಗಾವ ವೃತ್ತ ನೀರಿಕ್ಷಕರ ಕಚೇರಿಗೆ ಕರೆದಿದ್ದು , ಅಲ್ಲಿ ನಮ್ಮ ಸಮಕ್ಷಮ ಮೃತಳ ಒಳಾಂಗಗಳನ್ನು ಹಾಗೂ ಮೃತಳ ಕಪ್ಪು ಬಣ್ಣದ ಲಂಗ , ಕಪ್ಪು ಬಣ್ಣದ ರವಿಕೆ , ಚಾಕಲೇಟ ಬಣ್ಣದ ಹಾಫ್ ಸ್ವೆಟರ್ , ಕೆಂಪು ಬಣ್ಣದ ಸ್ಕಾರ್ಫ , ನೆರಳೆ ಮಿಶ್ರಿತಿ ಗುಲಾಬಿ ಬಣ್ಣದ ಸೀರೆಯನ್ನು ಅಮಾನತ್ತು ಪಡಿಸಿಕೊಂಡು ನಿಪಿ-17 ರಂತೆ ಪಂಚನಾಮೆಯನ್ನು ಮದ್ಯಾಹ್ನ 2.30 ರಿಂದ ಸಂಜೆ 5.30 ವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ಮುಮಾ-12 ರಿಂದ 16 ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

10) ದಿಃ 06.09.2019 ರಂದು ಚಾಸಾ-39 ಚಿದಾನಂದ ಇವರು ಮತ್ತೊಮ್ಮೆ ಕರೆಸಿ ನನಗೆ ನಿಪಿ-19 ರಂತೆ ನೊಟಿಸ ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ಹಾಗೂ ಪೋಲಿಸರನ್ನು ಶಿಗ್ಗಾಂವನ ಬಜಾರ ಓಣಿಯಲ್ಲಿರುವ ಮೃತ ಶಾಂತಾಬಾಯಿಯ ಮನೆಗೆ ಕರೆದುಕೊಂಡು ಹೋಗಿ ಆರೋಪಿ ನಾನು ನನ್ನ ಹೆಂಡತಿ ದಿಃ16.08.2019 ರಂದು ರಾತ್ರಿ 12.00 ರ ಸುಮಾರಿಗೆ ಮನೆಗೆ ಬಂದು ನಮ್ಮದು ಸಾಲ ಬಹಳ ಆಗಿದೆ ನಿನ್ನ ಹತ್ತಿರ ಹಣ ಇದೆ ಅದನ್ನು ಕೊಡು ನಂತರ ನಾವು ಕೊಡುತ್ತೇವೆ ಎಂದು ಕೇಳಿ ಅವಳು ಮನೆಯಲಿ ಹಣ ಇಲ್ಲ ಬ್ಯಾಂಕಿನಲ್ಲಿ ಇಟ್ಟಿರುತ್ತೇವೆ ಎಂದು ಹೇಳಿದಾಗ ಅವಳ ಮೈ ಮೇಲಿನ ಬಂಗಾರದ ಆಬರಣಗಳು ಇದ್ದು , ಅವುಗಳನ್ನು ಕೊಡು ಎಂದು ಕೇಳಿದಾಗ ಶಾಂತಾಬಾಯಿ ಕೊಡಲಿಲ್ಲ ಆಗ ನಾನು ನನ್ನ ಹೆಂಡತಿ ಅವಳ ಮೇಲಿರುವ ಆಬರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದು ಅವಳು ಕೊಡದೇ ಇದ್ದಾಗ ಅವಳನ್ನು ಮಂಚದ ಮೇಲೆ ಅಂಗಾತವಾಗಿ ಮಲಗಿಸಿ ಅವಳ ಕೈಗಳನ್ನು ಅವರ ಸೀರೆಯಿಂದ ಕಟ್ಟಿ ಕುತ್ತಿಗೆಗೆ ಇಬ್ಬರು ಸೇರಿ ಸೀರೆಯಿಂದ ಬಿಗಿದು ಕಣ್ಣಿಗೂ ಸಹ ಬಟ್ಟೆ ಕಟ್ಟಿ , ಅವಳು ಕೊಸರುದ್ದಾಗ ನನ್ನ ಹೆಂಡತಿ ಅವಳ ಮೇಲೆ ಹತ್ತಿ ಕುಳಿತು , ನಂತರ ನಾನು ಅವಳನ್ನು ತಲೆದಿಂಬಿನಿಂದ ಉಸಿರುಗಟ್ಟಿಸಿದೆ , ಆಗ ಅವಳು ಸತ್ತಿರುವುದನ್ನು ದೃಡ ಪಡಿಸಿಕೊಂಡು ಅವಳ ಮೈ ಮೇಲೆ ಇದ್ದ 6 ಬಂಗಾರದ ಬಳೆ , ಬಂಗಾರದ ಲಾಕೇಟ ಇರುವ

ಚೈನನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಇಟ್ಟಿರುತ್ತೇವೆ, ಆರೋಪಿ ಹೊಸ್ತಿಲ ಮೇಲೆ ಕೈ ಮಾಡಿ ತೋರಿಸಿ ಇಲ್ಲಿ ದೀಪ ಹಚ್ಚಿತ್ತು ಅಡುಗೆ ಮನೆಯಿಂದ ಗ್ಯಾಸ ಸೀಲೆಂಡರ್ ಆನ್ ಮಾಡಿ, ಗ್ಯಾಸ್ ಹೊರಗೆ ಬರುವಂತೆ ಮಾಡಿದೆನು ಎಂದು ಹೇಳಿ ಅಡುಗೆ ಕೊಣೆಯನ್ನು ತೋರಿಸಿದನು ಆಗ ಪೋಲಿಸರು ನಮ್ಮ ಸಮಕ್ಷಮ ನಿಪಿ-18 ರಂತೆ ಮದ್ಯಾಹ್ನ 1.15 – 2.15 ವರೆಗೆ ಪಂಚನಾಮೆ ಮಾಡಿ , ಛಾಯಾಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ.

11) ಆರೋಪಿ ತಾನು ಮುಚ್ಚಿಟ್ಟ ಬಂಗಾರದ ಬಳೆ ಹಾಗೂ ಲಾಕೇಟ ಇದ್ದ ಚೈನನ್ನು ತೋರಿಸುತ್ತೇನೆಂದು ಹೇಳಿ ನಮ್ಮನ್ನೆಲ್ಲ ಶಿಗ್ಗಾಂವನ ಜಯನಗರದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಟ್ರೆಜರಿಯ ಲಾಕರನಲ್ಲಿ ಬಚ್ಚಿಟ್ಟಿದ್ದ ಶಾಂತಾಬಾಯಿಯ 2 ದೊಡ್ಡ ಬಂಗಾರದ ಬಳೆಗಳು 48 ಗ್ರಾಂ, 4 ಸಣ್ಣ ಬಳೆಗಳು 50 ಗ್ರಾಂ ಹಾಗೂ ಲಾಕೇಟ ಇರುವ ಒಂದು ಚೈನ್ 38 ಗ್ರಾಂ 30 ಮಿಲಿ ಇವುಗಳನ್ನು ಪೋಲಿಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಮದ್ಯಾಹ್ನ 2.30 – 3.50 ವರೆಗೆ ಪಂಚನಾಮೆಯನ್ನು ನಿಪಿ-19 ರಂತೆ ಜರುಗಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎರಡು ಛಾಯಾಚಿತ್ರಗಳನ್ನು ತೆಗೆದರು ಎಂದರೆ ಸಾಕ್ಷಿಯು ಪೋಲಿಸರು ಠಾಣೆಯಿಂದ ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಛಾಯಾಚಿತ್ರ ತೆಗೆಸಿದ್ದರು ಎಂದರೆ ಸರಿಯಲ್ಲ.

12) ಆರೋಪಿಯು ಆ ದಿನ ನಮ್ಮ ಮುಂದೆ ಶಾಂತಾಬಾಯಿ ಆಭರಣಗಳನ್ನು ಹಾಜರು ಪಡಿಸಿದ್ದು , ಕೊಲೆ ಮಾಡಿದ ಸ್ಥಳವನ್ನು ತೋರಿಸಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13) ನನ್ನ ಸಮಕ್ಷಮ ದಿ:04.09.2019 ರಂದು ಪೋಲಿಸರು ಶಾಂತಾಬಾಯಿ ಬಟ್ಟೆ ಹಾಗೂ ಒಳಾಂಗಗಳನ್ನು ಅಮಾನತ್ತು ಪಡಿಸಿಕೊಂಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲೀ ಎಂದು ನ್ಯಾಯಾಲಯದ ಮುಂದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದಃ</u>

14) ಪೋಲಿಸ ಠಾಣೆಗೆ ನನ್ನನ್ನು ಕರೆಸಿದಾಗಲೇ ಮೂರು ಪಂಚನಾಮೆಗಳಿಗೆ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ಆಭರಣಗಳನ್ನು ಇದೆ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಛಾಯಾಚಿತ್ರದಲ್ಲಿ ನೋಡಿದ್ದು ಮೊದಲು ಎಲ್ಲಿಯೂ ನೋಡಿಲ್ಲ ಎಂದರೆ ಸರಿ. ನಾನು ಪೋಲಿಸ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ ನಂತರ ನೇರವಾಗಿ ಮನೆಗೆ ಹೋಗಿದ್ದು , ಬೇರೆ ಎಲ್ಲಿಯೂ ಹೋಗಿಲ್ಲ ಎಂದರೆ ಸರಿ.

15) ಪಂಚನಾಮೆಗಳಿಗೆ ಪೊಲಿಸ ಠಾಣೆಯಲ್ಲಿ ಸಹಿ ತೆಗೆದುಕೊಳ್ಳುವಾಗ ನೋಟಿಸಗೂ ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.

**PW-01**
**CW-01**

ದಿನಾಂಕಃ **12.09.2023** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯ್ತು**.**

**(**ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ಮತ್ತು ಪೋಕ್ಸೋ ಕಾಯಿದೆಯಡಿ ಈ ಸಾಕ್ಷಿಯ ಹೇಳಿಕೆಯನ್ನು ಇನ್ ಕ್ಯಾಮೇರಾ ಪ್ರೋಸಿಡಿಂಗ್ಸ್ ನಿಯಮದಂತೆ ದಾಖಲಿಸಿಕೊಳ್ಳಲಾಯಿತು**.** ಕರ್ಟನ್ ಹಾಕಲಾಗಿದೆ**. )**

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದು ಸಕಾರಣಗಳು ಇಲ್ಲದ ಕಾರಣ ಮನವಿಯನ್ನು ತಳ್ಳಿ ಹಾಕಿ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.